ಸಾಮಾನ್ಯ ಶಾಲೆಗಳಲ್ಲಿ ವಿಶೇಷ ಮಕ್ಕಳು

ಪಲ್ಲವಿ ದತ್ತಾ

ಏಳು ವರ್ಷದ ನೇಹಾ, ಭೋಪಾಲ್‌ನ ಪ್ರಮುಖ ಶಾಲೆಯೊಂದರಲ್ಲಿ ಎರಡನೇ ತರಗತಿಯಲ್ಲಿ ಓದುತ್ತಿರುವ ಬುದ್ಧಿವಂತ ವಿದ್ಯಾರ್ಥಿನಿ. ತನ್ನ ಶಿಕ್ಷಕರ ನೆಚ್ಚಿನ ಶಿಷ್ಯೆಯಾಗಿರುವ ಆಕೆ ತನ್ನ ಓರಗೆಯ ಗುಂಪಿನಲ್ಲಿ ನಾಯಕಿ. ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡುತ್ತಿರುವ ನೇಹಾ ತನ್ನ ಸಹಪಾಠಿಗಳಿಗೆ ಅವರ ಶಾಲೆಯ ಕೆಲಸಗಳಲ್ಲೂ ಸಹಾಯ ಮಾಡಲು ಇಷ್ಟಪಡುತ್ತಾಳೆ. ಅವಳು ಎಷ್ಟೊಂದು ಲವಲವಿಕೆಯಿಂದ ಇದ್ದಾಳೆ ಎಂದರೆ ಅವಳಿಗೆ ದೃಷ್ಟಿಹೀನತೆಯಿದೆ ಎಂಬುದೇ ಮರೆತುಹೋಗುತ್ತದೆ. ಆಕೆಯ ಪಠ್ಯಪುಸ್ತಕಗಳಲ್ಲಿ ಅಕ್ಷರಗಳನ್ನು ತೂತು ಮಾಡಿ, ಚುಚ್ಚಿ ಮೂಡಿಸಲಾಗಿದೆ (ಬ್ರೈಲ್), ಮುದ್ರಿಸಲಾಗಿಲ್ಲ.

ನೇಹಾಗೆ ನಾಲ್ಕು ವರ್ಷ ವಯಸ್ಸಾಗುವವರೆಗೆ ಯಾವುದೇ ಔಪಚಾರಿಕ ಶಿಕ್ಷಣ ದೊರೆತಿರಲಿಲ್ಲ. ಅವರ ಮನೆಯ ಸುತ್ತಮುತ್ತಲಿನ ಹೆಚ್ಚಿನ ಶಾಲೆಗಳು ವಿಶೇಷಚೇತನ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಸುಸಜ್ಜಿತವಾಗಿಲ್ಲದ ಕಾರಣ ಆಕೆಯ ಪೋಷಕರು ಅವಳನ್ನು ಮನೆಯಲ್ಲೇ (ಹೋಮ್–ಸ್ಕೂಲಿಂಗ್) ತಮ್ಮ ಕೈಲಾದಷ್ಟು ತರಬೇತುಗೊಳಿಸಿದ್ದರು. ಅವಳು ತನ್ನ ಮುಖ್ಯವಾಹಿನಿಯ ಶಾಲೆಯಲ್ಲಿ ಇತರ ಸಹಪಾಠಿಗಳಿಗಿಂತ ವಯಸ್ಸಿನಲ್ಲಿ ಹೆಚ್ಚು ದೊಡ್ಡವಳಾದರೆ ಹೇಗೆ ಸುಧಾರಿಸುತ್ತಾಳೆ, ಅವಳು ಇತರ ಮಕ್ಕಳಿಂದ ಪ್ರತ್ಯೇಕಿಸಲ್ಪಟ್ಟರೆ ಅಥವಾ ಕೆಟ್ಟದಾಗಿ ನಡೆಸಿಕೊಳ್ಳಲ್ಪಟ್ಟರೆ ಅಥವಾ ಬಹಿಷ್ಕರಿಸಲ್ಪಟ್ಟರೆ ತನ್ನನ್ನು ತಾನು ಹೇಗೆ ನಿಭಾಯಿಸಿಕೊಳ್ಳುತ್ತಾಳೆ ಎಂದು ಅವರು ತಮ್ಮ ಮಗುವಿನ ಬಗ್ಗೆ ಚಿಂತಿತರಾಗಿದ್ದರು. ಆಗ ಆಕೆಯ ಪೋಷಕರಿಗೆ ದೈಹಿಕ ಮತ್ತು ಬೌದ್ಧಿಕ ಅಸಾಮರ್ಥ್ಯ ಹೊಂದಿರುವ ಮಕ್ಕಳು ಮತ್ತು ವಯಸ್ಕರೊಂದಿಗೆ ಕಾರ್ಯನಿರ್ವಹಿಸುವ 'ಆರುಷಿ' ಎಂಬ ಲಾಭರಹಿತ ಸಂಸ್ಥೆಯ ಬಗ್ಗೆ ತಿಳಿಯಿತು. ಆನಂತರ ನೇಹಾಳನ್ನು ಅಲ್ಲಿಗೆ ಕರೆತಂದರು.

ತಮ್ಮ ಮೂಲಭೂತ ತತ್ವದ ಭಾಗವಾಗಿ, 'ಆರುಷಿ' ಸಂಸ್ಥೆಯಲ್ಲಿ ಮಕ್ಕಳು ಮತ್ತು ವಿಕಲಚೇತನರು 'ವಿಶೇಷ ಅಗತ್ಯತೆಗಳನ್ನು' ಪೂರೈಸುವ ಪರಿಸರದಿಂದ ಹೊರಬರುವಂತೆ ಪ್ರಯತ್ನಿಸುತ್ತದೆ ಮತ್ತು 'ಮುಖ್ಯವಾಹಿನಿ' ಸಮಾಜದಲ್ಲಿ ಹೊಂದಿಕೊಳ್ಳಲು ಅನುವು ಮಾಡಿಕೊಡುವ ಜೀವನ ಕೌಶಲಗಳೊಂದಿಗೆ ಅವರನ್ನು ಸಬಲಗೊಳಿಸುತ್ತದೆ.

ವಿಶೇಷ ಶಾಲೆಗಳ ಅಗತ್ಯ ಏಕೆ ಮತ್ತು ಯಾವಾಗ

ಸುಮಾರು 2 ರಿಂದ 6 ವರ್ಷ ವಯಸ್ಸಿನ ವಿಶೇಷಚೇತನ ಮಕ್ಕಳು ಸಾಮಾನ್ಯ ಶಾಲೆಗಳಿಗೆ ಅರ್ಹರಾಗಿದ್ದರೆ, ಅವರನ್ನು ಒಂದನೇ ತರಗತಿಗೆ ಕಳುಹಿಸುವ ನಿರ್ಧಾರವು ವ್ಯಕ್ತಿನಿಷ್ಠವಾದುದು ಮತ್ತು ಅದು ಮಗುವಿನ ಅಂಗವೈಕಲ್ಯದ ಸ್ವರೂಪ ಮತ್ತು ತೀವ್ರತೆಯನ್ನು ಆಧರಿಸಿದೆ. ಸಣ್ಣ ಪ್ರಮಾಣದ ಅಥವಾ ಮಧ್ಯಮ ಮಟ್ಟದ ಅಂಗವೈಕಲ್ಯ ಹೊಂದಿರುವ ಈ ವಯಸ್ಸಿನ ಮಕ್ಕಳು ಸಾಮಾನ್ಯ ಶಾಲೆಗಳಿಗೆ ಹೊಂದಿಕೊಳ್ಳುವ ಉತ್ತಮ ಅವಕಾಶವನ್ನು ಹೊಂದಿರುತ್ತಾರೆ.

ದೃಷ್ಟಿ ಅಥವಾ ಶ್ರವಣ ಸಂಬಂಧಿತ ಅಸಾಮರ್ಥ್ಯಗಳನ್ನು ಹೊಂದಿರುವ ಮಕ್ಕಳು ಯಾವುದೇ ವಯಸ್ಸಿನಲ್ಲಿ ಸಾಮಾನ್ಯ ಶಾಲೆಗೆ ಹೋಗಬಹುದು. ಏಕೆಂದರೆ ಅವರ ವೈಕಲ್ಯತೆ ಸಂಪೂರ್ಣವಾಗಿ ದೈಹಿಕವಾಗಿರುತ್ತದೆ ಮತ್ತು ಅದು ಬೌದ್ಧಿಕತೆಗೆ ಸಂಬಂಧಿಸಿರುವುದಿಲ್ಲ. ಡೌನ್ ಸಿಂಡ್ರೋಮ್, ಸ್ವಲೀನತೆ (ಆಟಿಸಂ) ಮತ್ತು ಇತರ ಬೌದ್ಧಿಕ ಅಸಾಮರ್ಥ್ಯಗಳಿರುವ ಮಕ್ಕಳು, ಅವರ ಬೆಳವಣಿಗೆಯ ಮೈಲಿಗಲ್ಲುಗಳು ನಿಗದಿತ ಸಮಯಕ್ಕಿಂತ ವಿಳಂಬವಾಗಿದ್ದರೂ ಸಹ ಸಾಮಾನ್ಯ ಶಾಲೆಗಳಿಗೆ ಹೋಗಬಹುದು ಆದರೆ ಅವರು ಹಾಗೆ ಶಾಲೆಗೆ ಹೋಗುವ ಮೊದಲು ಶಾಲಾಸಿದ್ಧತೆಗೆ ಬೆಂಬಲ ಮತ್ತು ತರಬೇತಿಯ ಅಗತ್ಯವಿರುತ್ತದೆ.

ವಿಶೇಷ ಮಕ್ಕಳು ಮುಖ್ಯವಾಹಿನಿಯ ಶಾಲೆಯಲ್ಲಿ ಓದುವಾಗ, ಅವರ ಮತ್ತು ಉಳಿದವರ ನಡುವಿನ ಸಂವಹನವು ವಿಕಲಚೇತನ ಮಕ್ಕಳ ಪರವಾಗಿ ಹೋರಾಡುವವರನ್ನು ರೂಪಿಸುತ್ತದೆ. ವಿಕಲಚೇತನರಲ್ಲದ ಮಕ್ಕಳು ವಿಕಲಚೇತನ ಮಕ್ಕಳ ಅಗತ್ಯಗಳು ಮತ್ತು ಸಾಮರ್ಥ್ಯಗಳ ಬಗ್ಗೆ ಬಾಲ್ಯದಾರಂಭದಲ್ಲಿಯೇ ಅರಿವನ್ನು ಬೆಳೆಸಿಕೊಳ್ಳುತ್ತಾರೆ, ಇದು ಸಮಾಜದಲ್ಲಿ ವಿಶೇಷಚೇತನರಿಗೆ ಸರಿಯಾದ ಸ್ಥಾನವನ್ನು ಕಲ್ಪಿಸಲು ಮಾತ್ರವಲ್ಲದೆ ಪರಾನುಭೂತಿಯುಳ್ಳ, ನ್ಯಾಯಯುತ ಮತ್ತು ಸಮ ಸಮಾಜವನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಅಂಗವೈಕಲ್ಯ ಹೊಂದಿರುವ ಮಗುವಿನ ಆರೈಕೆಯ ಅತ್ಯಂತ ನಿರ್ಣಾಯಕ ಭಾಗವೆಂದರೆ ಆರಂಭಿಕ ಹಂತದಲ್ಲಿಯೇ ಅದನ್ನು ಗುರುತಿಸುವುದು ಮತ್ತು ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವುದು. ಆರಂಭಿಕ ವರ್ಷಗಳಲ್ಲಿ ಬೆಳವಣಿಗೆಯ ವಿಳಂಬಗಳನ್ನು ಪೋಷಕರು ಮತ್ತು ಶಿಕ್ಷಕರು ಗಮನಿಸಬೇಕು. ಯಾವುದೇ ಬೆಳವಣಿಗೆಯ ಮೈಲಿಗಲ್ಲು ತಪ್ಪಿಹೋದರೆ ಅಥವಾ ವಿಳಂಬವಾದರೆ ಮೊದಲು, ಮಕ್ಕಳ ವೈದ್ಯರನ್ನು ಸಂಪರ್ಕಿಸಬೇಕು ಮತ್ತು ಅವರ ಸಲಹೆಯ ಮೇರೆಗೆ ಮಗುವನ್ನು ಅದರ ಅಗತ್ಯತೆಗಳನ್ನು ಪೂರೈಸುವ ಸಂಸ್ಥೆ ಮತ್ತು ಶಾಲೆಗೆ ದಾಖಲಿಸಬೇಕು. ಅಂತಹ ಸ್ಥಳದಲ್ಲಿ, ಸಲಹೆಗಾರರು

ಮತ್ತು ಮನಶಾಸ್ತ್ರಜ್ಞರು ಮಗು ಎದುರಿಸುತ್ತಿರುವ ತೊಂದರೆಯನ್ನು ಅರ್ಥಮಾಡಿಕೊಳ್ಳಲು ರೋಗನಿರ್ಣಯ ಪರೀಕ್ಷೆಗಳಂತಹ ವಿಧಾನಗಳನ್ನು ಬಳಸುತ್ತಾರೆ ಮತ್ತು ಅಗತ್ಯವಿರುವ ಮಧ್ಯಪ್ರವೇಶಕ್ಕೆ ಯೋಜನೆಯನ್ನು ರೂಪಿಸುತ್ತಾರೆ. ತಮ್ಮ ಮಗು ವಿಶೇಷಚೇತನ ಎಂಬುದಕ್ಕಾಗಿ ಅದನ್ನು ಅತಿಯಾಗಿ ರಕ್ಷಿಸುವ ಅಥವಾ ಮಗುವಿನ ವಿಕಲತೆಯನ್ನು ನಿರಾಕರಿಸುವ ಮನೋಭಾವವುಳ್ಳ ಆರೈಕೆದಾರರು ಮಗುವಿಗೆ ಸೂಕ್ತವಾದ ಚಿಕಿತ್ಸೆ ಮತ್ತು ಬೆಂಬಲವನ್ನು ಪಡೆಯುವ ಪ್ರಕ್ರಿಯೆಯನ್ನು ತಡೆಯುತ್ತಾರೆ. ಹಾಗಾದಾಗ ವಿಶೇಷ ಚೇತನರು ತಮ್ಮ ಜೀವನದ ಮೇಲೆ ಸ್ವಾತಂತ್ರ್ಯ ಮತ್ತು ನಿಯಂತ್ರಣವನ್ನು ಪಡೆದುಕೊಳ್ಳುವ ಅವಕಾಶದಿಂದ ವಂಚಿತರಾಗುತ್ತಾರೆ.

ಶಾಲಾ ಸಿದ್ಧತಾ ಕಾರ್ಯಕ್ರಮ

ಆರುಷಿಯಲ್ಲಿನ ವಿಶೇಷ ಶಿಕ್ಷಕರು ನೇಹಾಗೆ ಬ್ರೈಲ್ ಲಿಪಿಯನ್ನು ಕಲಿಸುವತ್ತ ಗಮನಹರಿಸಿದರು, ಅದರೊಂದಿಗೆ ವೃತ್ತಿನಿರತ ಚಿಕಿತ್ಸಕರು (ಆಕ್ಯುಪೇಶನಲ್ ಥೆರಪಿಸ್ಟ್) ಓಡಾಡುವ, ದೈನಂದಿನ ಜೀವನಕ್ಕೆ ಅಗತ್ಯವಿರುವ ಇತರ ಕೌಶಲಗಳನ್ನು ಕಲಿಸಲು ಸಹಾಯ ಮಾಡಿದರು. ಆರುಷಿಯಲ್ಲಿನ ಶಿಕ್ಷಕರು ಬ್ರೈಲ್ ಓದಲು ಸಾಧ್ಯವಾಗುವಂತೆ ಮೌಖಿಕ ಮತ್ತು ಇಂದ್ರಿಯ ಸೂಕ್ಷ್ಮತೆ ಗಳಿಸುವ ವ್ಯಾಯಾಮಗಳನ್ನು ಪ್ರಾರಂಭಿಸಿದರು. ಇದರೊಂದಿಗೆ, ಅಲ್ಲಿನ ಶಿಕ್ಷಕರು ಮುಖ್ಯವಾಹಿನಿಯ ಶಿಕ್ಷಣಕ್ಕಾಗಿ ಆಕೆಯ ಸಾಮರ್ಥ್ಯ ಮತ್ತು ಸಿದ್ಧತೆಯನ್ನು ಮೌಲ್ಯಮಾಪನ ಮಾಡಿದರು. ನೇಹಾಳನ್ನು ಒಂದು ಸಾಮಾನ್ಯ ಶಾಲೆಯಲ್ಲಿ ಯಶಸ್ವಿಯಾಗಿ ತೊಡಗಿಸುವುದನ್ನು ನಿರ್ಧರಿಸಲು ಆರು ತಿಂಗಳು ಹಿಡಿಯಿತಾದರೂ ಆಕೆ ಅದರಲ್ಲಿಯೂ ಸಹ ಯಶಸ್ವಿಯಾಗ-ಬಲ್ಲಳು ಎಂಬುದು ತಿಳಿಯಿತು.

ಕೊಶಿಶ್ ಎಂಬುದು, ಆರುಷಿಯಲ್ಲಿ, ಸಾಮಾನ್ಯ ಶಾಲೆಗಳಲ್ಲಿ ದಾಖಲಾಗದ ಐದು ವರ್ಷದೊಳಗಿನ ವಿಕಲಚೇತನ ಮಕ್ಕಳಿಗಾಗಿ ನಡೆಸಲಾಗುವ ಶಾಲಾ ಸಿದ್ಧತೆಯ ಕಾರ್ಯಕ್ರಮವಾಗಿದೆ. ಇಲ್ಲಿ, ಸೆರೆಬ್ರಲ್ ಪಾಲ್ಸಿ, ಕಲಿಕೆಯ ತೊಂದರೆಗಳು ಮತ್ತು ಇತರ ದೈಹಿಕ ನ್ಯೂನತೆಗಳು ಮತ್ತು ನಿಧಾನಗತಿಯ ಬೆಳವಣಿಗೆಗಳನ್ನು ಹೊಂದಿರುವ ಮಕ್ಕಳು, ಮೂಲಭೂತ ಅಗತ್ಯ ಶಾಲಾ ಸಿದ್ಧತಾ ಕೌಶಲಗಳೊಂದಿಗೆ ಸಿದ್ಧಗೊಳ್ಳುತ್ತಾರೆ, ಆದ್ದರಿಂದ ಅವರನ್ನು ಶೀಘ್ರವಾಗಿ ಸಾಮಾನ್ಯ ಶಾಲೆಗಳಿಗೆ ಸೇರಿಸಬಹುದು. ಅವರ ವಿಕಲಚೇತನ ಸ್ವರೂಪ ಮತ್ತು ಕಾರಣವನ್ನು ಮೌಲ್ಯಮಾಪನ ಮಾಡಿದ ನಂತರ, ಅವರ ಚಿಕಿತ್ಸೆಗಾಗಿ ವಿವರವಾದ ಯೋಜನೆಯನ್ನು ತಯಾರಿಸಲಾಗುತ್ತದೆ. ಬೌದ್ಧಿಕ ಅಸಾಮರ್ಥ್ಯ ಹೊಂದಿರುವ ಮಕ್ಕಳು ಸಂಯೋಜನೆ, ಕಣ್ಣಲ್ಲಿ ಕಣ್ಣಿಟ್ಟು ನೋಡುವ, ಗಮನ ನೀಡುವ ಅವಧಿಯನ್ನು ಸುಧಾರಿಸಲು ಆಕ್ಯುಪೇಶನಲ್ ಥೆರಪಿಯನ್ನು ಪಡೆಯುತ್ತಾರೆ ಅದರೊಂದಿಗೆ ದೀರ್ಘಾವಧಿಯವರೆಗೆ ಕುಳಿತುಕೊಳ್ಳುವ ಮತ್ತು ಕೈಯಲ್ಲಿ ಮಾಡುವ ಕೆಲಸಗಳತ್ತ ಗಮನವನ್ನು ಕೇಂದ್ರೀಕರಿಸಲು, ತರಬೇತಿ ಪಡೆಯುವುದರಿಂದ ಅವರು ಸಾಮಾನ್ಯ ತರಗತಿಗಳಲ್ಲಿ ಹೊಂದಿಕೊಳ್ಳಲು ಸುಲಭವಾಗುತ್ತದೆ.

ಮಾತನಾಡುವ ತೊಂದರೆ ಹೊಂದಿರುವ ಮಕ್ಕಳು ವಾಕ್ ಚಿಕಿತ್ಸೆಯನ್ನು ಪಡೆಯುತ್ತಾರೆ. ಮಗುವಿಗೆ ಶ್ರವಣ ದೋಷವಿದೆಯೇ ಎಂದೂ ಚಿಕಿತ್ಸಕರು ನಿರ್ಧರಿಸುತ್ತಾರೆ. ಹಾಗಿದ್ದಲ್ಲಿ, ಅವರು ಶ್ರವಣ ಸಾಧನದ ಅಗತ್ಯ ಮತ್ತು ಪರಿಣಾಮಕಾರಿತ್ವವನ್ನು ನಿರ್ಧರಿಸುತ್ತಾರೆ. ಮಗುವು ಸಹಾಯವಿಲ್ಲದೆ ಕೇಳಬಹುದು ಆದರೆ ಇನ್ನೂ ಮಾತನಾಡುತ್ತಿಲ್ಲ ಎಂಬುದನ್ನು ಕಂಡುಕೊಂಡರೆ, ಈ ಮಕ್ಕಳಿಗೆ ಸಹಾಯ ಮಾಡಲು ಸ್ಪೀಚ್ ಥೆರಪಿಸ್ಟ್‌ಗಳು ಪರ್ಯಾಯ ವಿಧಾನಗಳನ್ನು ಬಳಸುತ್ತಾರೆ. ಈ ಚಿಕಿತ್ಸೆಗಳು ದೀರ್ಘಾವಧಿಯದ್ದಾಗಿರುತ್ತವೆ ಮತ್ತು ಮಗುವನ್ನು ಸಾಮಾನ್ಯ ಶಾಲೆಗೆ ಸಂಯೋಜಿತಗೊಂಡ ನಂತರವೂ ಮುಂದುವರಿಯುತ್ತವೆ.

ಆಟದ (ಪ್ಲೇ-ವೇ) ವಿಧಾನವನ್ನು ಬಳಸಿಕೊಂಡು, ವಿಶೇಷ ಶಿಕ್ಷಕರು ಮಕ್ಕಳಿಗೆ ಶ್ರಾವ್ಯ, ದೃಶ್ಯ ಮತ್ತು ಸ್ಪರ್ಶ ಪ್ರಚೋದಕಗಳನ್ನು ಪರಿಚಯಿಸುತ್ತಾರೆ. ಕಲಿಯಲು ಮಗುವಿನ ಸಿದ್ಧತೆ, ಅದರ ಭಾವನಾತ್ಮಕ ಮತ್ತು ದೈಹಿಕ ಸಾಮರ್ಥ್ಯಗಳಂತಹ ಅಂಶಗಳಿಂದ ಮಾರ್ಗದರ್ಶಿಸಲ್ಪಟ್ಟ ಶಿಕ್ಷಕರು, ಮಕ್ಕಳು 'ವಿಶೇಷ' ಎಂಬ ಕಿರಿದಾದ ಮಿತಿಗಳನ್ನು ಮೀರಿ ಜಗತ್ತಿನಲ್ಲಿ ಬೆಳವಣಿಗೆ ಹೊಂದಲು ಅಗತ್ಯವಿರುವ ಕೌಶಲ ಮತ್ತು ಸಾಧನಗಳೊಂದಿಗೆ ಮಕ್ಕಳನ್ನು ಸಜ್ಜುಗೊಳಿಸಲು ಅನೇಕ ತಂತ್ರಗಳನ್ನು ಬಳಸುತ್ತಾರೆ ಮತ್ತು ಅವರು ಸ್ವತಂತ್ರವಾಗಿ ಬದುಕಲು ಮತ್ತು ತಮ್ಮ ಕೆಲಸಗಳನ್ನು ಮಾಡಿಕೊಳ್ಳಲು ತರಬೇತಿ ನೀಡುತ್ತಾರೆ.

ಬ್ರೈಲ್, ಐಂದ್ರಿಯಕ ಮತ್ತು ಚಲನಾ ವ್ಯಾಯಾಮಗಳು ನೇಹಾಳ ತರಬೇತಿಯ ಕೇಂದ್ರಬಿಂದುವಾಗಿದ್ದರೆ, ಪ್ರತಿ ಮಗುವಿಗೆ ಆರುಷಿಯಲ್ಲಿ ನೀಡಲಾಗುವ ತಂತ್ರ ಮತ್ತು ಚಿಕಿತ್ಸೆಗಳು ಅವರ ಅಗತ್ಯಗಳಿಗೆ ಅನುಗುಣವಾಗಿ ಭಿನ್ನಭಿನ್ನವಾಗಿರುತ್ತವೆ. ಉದಾಹರಣೆಗೆ, ಡೌನ್ ಸಿಂಡ್ರೋಮ್ ಇರುವ ಮಕ್ಕಳು ಕೇವಲ ದೈಹಿಕ ಮಿತಿಗಳನ್ನು ಅನುಭವಿಸುವುದಿಲ್ಲ, ಬೆಳವಣಿಗೆ ಮತ್ತು ಸಾಮಾಜಿಕ ಸವಾಲುಗಳನ್ನು ಸಹ ಅನುಭವಿಸುತ್ತಾರೆ ಮತ್ತು ಸಾಮಾನ್ಯವಾಗಿ ಸ್ಪಷ್ಟವಾಗಿ ಮಾತನಾಡಲು ಕಷ್ಟಪಡಬಹುದು. ಆಗ ಅವರ ಕಲಿಕೆಗಳು ವಾಕ್ ಚಿಕಿತ್ಸೆ, ಬೇರೆಯವರೊಂದಿಗೆ ಕಣ್ಣಲ್ಲಿ ಕಣ್ಣಿಟ್ಟು ಸಂಪರ್ಕ ಸಾಧಿಸುವುದು ಮತ್ತು ಶೈಕ್ಷಣಿಕ ಜ್ಞಾನವನ್ನು ಗಳಿಸುವುದರೊಂದಿಗೆ ಸಾಮಾಜಿಕ ಕೌಶಲಗಳನ್ನು ಚುರುಕುಗೊಳಿಸುವುದನ್ನು ಒಳಗೊಂಡಿರುತ್ತದೆ. ಅವರ ಸಾಮಾಜೀಕರಣ ಕೌಶಲಗಳು ಕೋಶಿಶ್‌ನಲ್ಲಿನ ಬೋಧಕರು ಗಮನಹರಿಸುವ ಮತ್ತೊಂದು ಬೆಳವಣಿಗೆಯ ಕ್ಷೇತ್ರವಾಗಿದೆ. ಇಂಥ ತರಬೇತಿಯಿಲ್ಲದೆ, ಈ ಮಕ್ಕಳು ಮಿಶ್ರ (ವಿಶೇಷಚೇತನ ಮತ್ತು ಸಾಮಾನ್ಯ ಮಕ್ಕಳ) ತರಗತಿಯಲ್ಲಿ ಚೆನ್ನಾಗಿ ಹೊಂದಿಕೊಳ್ಳಲು ಸಾಧ್ಯವಿಲ್ಲ.

ಆರೈಕೆದಾರರೊಂದಿಗೆ ಸಮಾಲೋಚನೆ

ನೇಹಾಳನ್ನು ಸಾಮಾನ್ಯ ಶಾಲೆಗೆ ಕಳುಹಿಸುವ ಬಗ್ಗೆ ಆತಂಕ ಹೊಂದಿದ್ದ ನೇಹಾಳ ಪೋಷಕರಿಗೆ ಈ ಬಗ್ಗೆ ಸಲಹೆ ನೀಡಲಾಯಿತು. ದೃಷ್ಟಿಮಾಂದ್ಯರಿಗಾಗಿ ಇರುವ ಶಾಲೆಗಳು ಉತ್ತಮ ಉದ್ದೇಶ ಹೊಂದಿವೆ ಮತ್ತು ಅವರಿಗೆ ಸಾಕಷ್ಟು ಬೆಂಬಲವನ್ನು ನೀಡುತ್ತವೆ, ಆದರೆ ನೇಹಾಳ ಕಲಿಕೆ ಮತ್ತು ಅನುಭವಗಳನ್ನು ಅವು ಸೀಮಿತಗೊಳಿಸುತ್ತವೆ ಎಂದು ಸಲಹೆಗಾರರು ಅವರಿಗೆ ವಿವರಿಸಿದರು. ಅಂಗವಿಕಲರಲ್ಲದ ಮಕ್ಕಳ ಸಹವಾಸ ಮತ್ತು ನಡವಳಿಕೆಯ ಪ್ರಭಾವವು ನೇಹಾಳ ಬೆಳವಣಿಗೆಯಲ್ಲಿ ವೇಗವರ್ಧಕವಾಗಿರುತ್ತದೆ. ಅಂಗ-ವೈಕಲ್ಯತೆಯನ್ನು ಮೀರಿ ಎಲ್ಲ ಅವಕಾಶಗಳನ್ನು ಹೊಂದುವುದು ಮಗುವಿನ ಹಕ್ಕು, ತಮ್ಮ ಸಾಮರ್ಥ್ಯವನ್ನು ಒರೆಗೆ ಹಚ್ಚುವುದನ್ನು ಮಕ್ಕಳು ಆನಂದಿಸುತ್ತಾರೆ. ಆರುಷಿಯಲ್ಲಿ, ಮಕ್ಕಳು ಶಾಲೆಯಂತೆಯೇ ಮನೆಯಲ್ಲಿಯೂ ಅದೇ ಸಬಲೀಕರಣವನ್ನು ಅನುಭವಿಸುತ್ತಾರೆ ಎಂದು ಖಚಿತಪಡಿಸಿಕೊಳ್ಳಲು ಪೋಷಕರಿಗೂ ಸಮಾಲೋಚನೆ ನೀಡಲಾಗುತ್ತದೆ.

ಶಾಲಾ ಪ್ರವೇಶದ ನಂತರ

ಬ್ರೈಲ್ ಮತ್ತು ಆಕ್ಯುಪೇಷನಲ್ ಥೆರಪಿಯಲ್ಲಿ ಕೌಶಲ ತರಬೇತಿಯ ಜೊತೆಗೆ, ನೇಹಾ ಶಾಲಾಪೂರ್ವ ಪಠ್ಯಕ್ರಮದ ತರಬೇತಿ ಪಡೆದಿದ್ದಳು. ಆದ್ದರಿಂದ ಆಕೆ ಈ ಆಯಾಮದಲ್ಲೂ ತನ್ನ ಓರಗೆಯವರಿಗೆ ಸರಿಸಮಾನವಾಗಿ ಕಲಿಕಾ ವೇಗವನ್ನು ಹೊಂದಿದ್ದಳು. ನೇಹಾ, ಆಕೆಯ ಪೋಷಕರು ಮತ್ತು ಅವಳ ಶಿಕ್ಷಕರು ಮಾಡಿದ ಎಲ್ಲಾ ಕಠಿಣ ಪರಿಶ್ರಮದ ಫಲವಾಗಿ, 2021 ರಲ್ಲಿ ಸರ್ಕಾರಿ ಶಾಲೆಗೆ ನೇರವಾಗಿ ಒಂದನೇ, ಆರು ವರ್ಷದ ಮಗುವಿಗೆ ಸೂಕ್ತವಾದ ತರಗತಿಗೆ ಸೇರುವಂತಾಯಿತು.

ನೇಹಾ ಶಾಲೆಯ ಅವಧಿ ಮುಗಿದ ನಂತರ ಕೂಡ ಆರುಷಿಗೆ ಬರುವುದನ್ನು ಮುಂದುವರೆಸಿದ್ದಾಳೆ, ಅಲ್ಲಿ ಆಕೆ ತನ್ನ ಶಿಕ್ಷಣಕ್ಕೆ ಅಗತ್ಯವಿರುವ ಹೆಚ್ಚುವರಿ ಬೆಂಬಲವನ್ನು ಪಡೆಯುತ್ತಾಳೆ. ಇದರೊಂದಿಗೆ ಅಲ್ಲಿ ಆಕೆಗೆ ಶಾಲಾ ಜೀವನದ ಇತರ ಪಠ್ಯೇತರ ಚಟುವಟಿಕೆಗೆಗೂ ಸಹಾಯ ದೊರಕುತ್ತದೆ. ನಾಟಕ, ಸಂಗೀತ, ನೃತ್ಯ, ಯೋಗ ಮತ್ತು ಕರಕುಶಲ ಕೌಶಲಗಳು ವಿಕಲಚೇತನ ಮಕ್ಕಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಮತ್ತು ಅವರ ಸಮಗ್ರ ಬೆಳವಣಿಗೆಗೆ ಪೂರಕ ವಾತಾವರಣವನ್ನು ಒದಗಿಸಲು ಆರುಷಿ ಈ ಎಲ್ಲ ವಿಧಾನಗಳನ್ನು ಬಳಸಿಕೊಳ್ಳುತ್ತದೆ. ವ್ಯಕ್ತಿತ್ವ ವಿಕಸನದಲ್ಲಿ ರಂಗಭೂಮಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಕಾಗದ ಕತ್ತರಿಸುವುದು, ಮಡಿಚುವುದು ಮತ್ತು ಅಂಟಿಸುವುದು ವಿಶೇಷವಾಗಿ ಆಟಿಸಂ ಸ್ಪೆಕ್ಟ್ರಮ್‌ನಲ್ಲಿರುವ ಮಕ್ಕಳಿಗೆ ಕೈ-ಕಣ್ಣಿನ ಸಂಯೋಜನೆ ಮತ್ತು ಸೂಕ್ಷ್ಮ ಚಲನಾ ಕೌಶಲಗಳನ್ನು ಸುಧಾರಿಸುತ್ತದೆ.

ಶಿಕ್ಷಕರೊಂದಿಗೆ ಕೆಲಸ

ಅಸಾಮರ್ಥ್ಯವುಳ್ಳ ಮಗುವಿನ ಈ ಸಂಪೂರ್ಣ ಪ್ರಯಾಣದಲ್ಲಿ ವಿಕಲಾಂಗತೆ ಇಲ್ಲದೆ ತಮ್ಮ ಓರಗೆಯವರೊಂದಿಗೆ ಓದುವ ಮತ್ತು ಬೆಳೆಯುವಲ್ಲಿ ಶಾಲೆಯ ಶಿಕ್ಷಕರು ಪ್ರಮುಖ ಪಾತ್ರವನ್ನು ವಹಿಸುತ್ತಾರೆ ಮತ್ತು ಸಾಮಾನ್ಯ ಶಾಲಾ ವ್ಯವಸ್ಥೆಯಲ್ಲಿ ಈ ಮಕ್ಕಳ ಯಶಸ್ಸು ಶಿಕ್ಷಕರ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ, ಈ ಶಿಕ್ಷಕರು ವಿಕಲಚೇತನ ಮಕ್ಕಳು ಸಾಮಾನ್ಯ ಶಾಲೆಗಳಲ್ಲಿ ಅಧ್ಯಯನ ಮಾಡುವ ಅಗತ್ಯವನ್ನು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಅವರು ಸಾಧ್ಯವಿರುವ ಎಲ್ಲ ರೀತಿಯಲ್ಲಿ ಇದನ್ನು ಬೆಂಬಲಿಸುತ್ತಾರೆ. ಅಲ್ಲದೆ, ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನಿರಾಕರಿಸುವಲ್ಲಿ ಮುಖ್ಯವಾಹಿನಿಯ ಶಾಲೆಗಳು ಉಲ್ಲೇಖಿಸಿದ ಮುಖ್ಯ ಕಾರಣವೆಂದರೆ ತರಬೇತಿ ಪಡೆದ ಸಿಬ್ಬಂದಿಯ ಕೊರತೆ. ಈ ಕೊರತೆಯನ್ನು ನಿವಾರಿಸಲು, ಆರುಷಿಯು ಶಾಲಾ ಶಿಕ್ಷಕರು ಮತ್ತು ಆಡಳಿತಗಾರರಿಗೆ ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ, ಅದು ಅಂಗವೈಕಲ್ಯತೆ ಬಗ್ಗೆ ಇರುವ ಮಿಥ್ಯೆಗಳು ಮತ್ತು ತಪ್ಪು ಕಲ್ಪನೆಗಳನ್ನು ಹೋಗಲಾಡಿಸುತ್ತದೆ ಹಾಗೂ ಮುಖ್ಯವಾಹಿನಿಯ ಶಾಲೆಗಳಲ್ಲಿ ವಿಕಲಾಂಗ ಮಕ್ಕಳ ಕಲಿಕೆಯ ಮಹತ್ವವನ್ನು ಒತ್ತಿ ಹೇಳುತ್ತದೆ.


ಅವರು ಪರಿಚಯಾತ್ಮಕ ಕಾರ್ಯಾಗಾರ (ಓರಿಯೆಂಟೇಶನ್ ವರ್ಕ್ ಶಾಪ್)ಗಳನ್ನು ನಡೆಸುತ್ತಾರೆ, ಇದರಲ್ಲಿ ಶಿಕ್ಷಕರು ತಮ್ಮ ತರಗತಿಯ ಅನುಭವಗಳನ್ನು ತಜ್ಞರೊಂದಿಗೆ ಹಂಚಿಕೊಳ್ಳುತ್ತಾರೆ, ತಜ್ಞರು ವಿಶೇಷ ಚೇತನ ಮಕ್ಕಳ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳಲು ಶಿಕ್ಷಕರಿಗೆ ಸಹಾಯ ಮಾಡುತ್ತಾರೆ. ಶಿಕ್ಷಕರಿಗೆ ನವೀಕೃತ ಬೋಧನಾ ಸಾಮಗ್ರಿಗಳು, ಬೋಧನಾ ವಿಧಾನ ಮತ್ತು ವಿಕಲಚೇತನ ಮಕ್ಕಳಿರುವ ತರಗತಿಗಳಲ್ಲಿ ಅವರು ಬಳಸಿಕೊಳ್ಳಬಹುದಾದ ತಂತ್ರಗಳನ್ನು ಪರಿಚಯ ಮಾಡಿಸಲಾಗುತ್ತದೆ. ಇದರೊಂದಿಗೆ ಮಕ್ಕಳು ಅನುಭವಿ-ಸುತ್ತಿರುವ ಕಲಿಕೆಯ ಹಾಗೂ ಇತರ ತೊಂದರೆಗಳನ್ನು ಗುರುತಿಸುವ ಮತ್ತು ನಿರ್ಣಯಿಸುವ ವಿಧಾನಗಳನ್ನು ಸಹ ಶಿಕ್ಷಕರು ಕಲಿಯುತ್ತಾರೆ. ಹಲವು ವರ್ಷಗಳಲ್ಲಿ, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢದಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಸರ್ಕಾರಿ ಶಾಲಾ ಶಿಕ್ಷಕರು ಈ ಪರಿಚಯಾತ್ಮಕ ಕಾರ್ಯಾಗಾರ ಮತ್ತು ತರಬೇತಿಗಳಿಗೆ ಹಾಜರಾಗಿದ್ದಾರೆ.

ಶಾಲೆಗಳಲ್ಲಿ ಅವರ ಕೆಲಸವನ್ನು ಬೆಂಬಲಿಸಲು, ಆರುಷಿಯು ಶಿಕ್ಷಕರಿಗೆ ಬೋಧನಾ ಸಾಧನಗಳನ್ನು ಒದಗಿಸುತ್ತದೆ, ಉದಾಹರಣೆಗೆ ದೇವನಾಗರಿ ಮತ್ತು ಇಂಗ್ಲಿಷ್‌ನಲ್ಲಿನ ವರ್ಣಮಾಲೆಗಳ ಚಾರ್ಟ್‌ಗಳ ಜೊತೆಗೆ ಬ್ರೈಲ್ ಮತ್ತು ಸಂಕೇತ ಭಾಷೆಯಲ್ಲಿ ಅದಕ್ಕೆ ಅನುಗುಣವಾದ ಚಿಹ್ನೆಗಳು. ದೃಷ್ಟಿ ದೋಷಗಳನ್ನು ಹೊಂದಿರುವ ಮಕ್ಕಳಿಗೆ ಬ್ರೈಲ್ ಮತ್ತು

ಗಣಿತವನ್ನು ಕಲಿಸುವ ಮತ್ತು ಶ್ರವಣ ಸಮಸ್ಯೆ ಇರುವವರಿಗೆ ಸಂಕೇತ ಭಾಷೆಯನ್ನು ಕಲಿಸುವ ಕುರಿತು ಇದು ವೀಡಿಯೊ ಟ್ಯುಟೋರಿಯಲ್‌ಗಳನ್ನು ಸಹ ಸೃಷ್ಟಿಸಿದೆ.

ವಿಶೇಷಚೇತನ ಮಕ್ಕಳಿರುವ ತರಗತಿಗಳ ಶಿಕ್ಷಕರಿಗೆ ಸಾಮಾನ್ಯ ಸಲಹೆಗಳು

- ಸ್ನೇಹಿತರ ಗುಂಪಿನಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡುವ ವ್ಯವಸ್ಥೆಯನ್ನು ಪ್ರಾರಂಭಿಸುವುದು ಮತ್ತು ಅವರಿಗೆ ಸಹಾಯ ಮಾಡಲು ಸಿದ್ಧರಿರುವ ಮತ್ತು ಸಮರ್ಥರಾಗಿರುವ ಇತರ ವಿದ್ಯಾರ್ಥಿಗಳೊಂದಿಗೆ ಅವರನ್ನು ಕೂರಿಸುವುದು
- ವಿಕಲಚೇತನರಿಗೆ ಸಹಾಯ ಮಾಡಲು, ಅವರಿಗೆ ಬದಲಾಗಿ ಪರೀಕ್ಷೆ ಬರೆಯಲು, ಟಿಪ್ಪಣಿ ಬರೆದುಕೊಡಲು ಮತ್ತು ಓದುಗರಾಗಲು ಓರಗೆಯವರನ್ನು ಸ್ವಯಂ ಸೇವಕರಾಗುವಂತೆ ಪ್ರೋತ್ಸಾಹಿಸುವುದು
- ಪಠ್ಯಗಳು, ಪರೀಕ್ಷೆಗಳು ಮತ್ತು ವಿವಿಧ ಕಾರ್ಯಯೋಜನೆಗಳಲ್ಲಿ/ ಅಸೈನ್ಮೆಂಟ್‌ಗಳಲ್ಲಿ ಅವರಿಗೆ ಹೆಚ್ಚಿನ ಸಮಯಾವಕಾಶವನ್ನು ನೀಡುವುದು.
- ಸೂಚನೆಗಳನ್ನು ಮತ್ತು ಪ್ರಶ್ನೆಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲಾಗಿದೆ ಎಂದು ಖಾತ್ರಿಪಡಿಸಿಕೊಳ್ಳಲು ಅವನ್ನು ಪುನರಾವರ್ತಿಸುವುದು.




ಚಿತ್ರ 1. ಬ್ರೈಲ್ ಲಿಪಿಯನ್ನು ಅರ್ಥಮಾಡಿಕೊಳ್ಳುವುದು, ಒಂದು ಬೋಧನಾ ಸಾಧನ

ದೃಷ್ಟಿ ವಿಕಲತೆ ಹೊಂದಿರುವ ಮಗು ತರಗತಿಯಲ್ಲಿದ್ದಾಗ:

- ಸ್ಪರ್ಶ(ಮುಟ್ಟಿ ನೋಡುವ) ಬೋಧನೆಯನ್ನು ಹೆಚ್ಚಿಸುವುದು
- ಸಾಧ್ಯವಿರುವಲ್ಲಿ ಚಿತ್ರಗಳ ಬದಲಿಗೆ 3D ಮಾದರಿಗಳನ್ನು ಬಳಸುವುದು
- ಮಾದರಿಗಳು ಲಭ್ಯವಿಲ್ಲದಿದ್ದರೆ ಚಿತ್ರಗಳನ್ನು ವಿವರಿಸುವುದು
- ಸನ್ನೆಗಳು ಅಥವಾ ದೈಹಿಕ ಅಭಿವ್ಯಕ್ತಿಗಳ ಬದಲಿಗೆ ಧ್ವನಿ ಸೂಚನೆಗಳು ಮತ್ತು ಸುಳಿವುಗಳನ್ನು ಬಳಸುವುದು
- ದೃಷ್ಟಿ ವಿಕಲತೆ ಹೊಂದಿರುವ ವಿದ್ಯಾರ್ಥಿಗಳನ್ನು ತರಗತಿಯ ಮುಂಭಾಗದಲ್ಲಿ ಕೂರಿಸುವುದು

ಶ್ರವಣದೋಷವುಳ್ಳ ಮಗು ತರಗತಿಯಲ್ಲಿದ್ದಾಗ:

- ಹೆಚ್ಚು ದೃಶ್ಯ ಸಾಧನಗಳ ಮೂಲಕ ಬೋಧಿಸುವುದು
- ಯಾವುದೇ ಸೂಚನೆ ನೀಡಿದರೂ ಅದರ ಲಿಖಿತ ಪ್ರತಿಗಳು ಮತ್ತು ದೃಶ್ಯ ಸಾಧನಗಳನ್ನು ಒದಗಿಸುವುದು
- ತರಗತಿಯಲ್ಲಿ ಬಳಸಲಾಗುವ ವೀಡಿಯೊಗಳಲ್ಲಿ ಉಪ ಶೀರ್ಷಿಕೆಗಳನ್ನು ಬಳಸುವುದು
- ತರಗತಿಯ ಮುಂಭಾಗದಲ್ಲಿ ಅವರನ್ನು ಕೂರಿಸುವುದು. ಇದರಿಂದ ಅವರು ಸುಲಭವಾಗಿ ತುಟಿಯ ಚಲನೆಯನ್ನು ಅನುಸರಿಸಿ ಅದನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಓದಬಹುದು




ಚಿತ್ರ 2. ವಿಶೇಷ ಚೇತನ ಮಕ್ಕಳಿರುವ ತರಗತಿಯ ಶಿಕ್ಷಕರಿಗೆ ಕೆಲವು ಸರಳ ಸೂಚನೆಗಳು

ಸಾರಾಂಶ

ಮುಖ್ಯವಾಹಿನಿಯ ಶಿಕ್ಷಣದಲ್ಲಿ ಸೇರ್ಪಡೆಯಾಗಲು ಆರುಷಿ ೫೦೦ಕ್ಕೂ ಹೆಚ್ಚು ಮಕ್ಕಳಿಗೆ ಬೆಂಬಲ ನೀಡಿದೆ. ಈ ಪ್ರತಿಯೊಂದು ಯಶಸ್ಸಿನ ಕಥೆಯ ಹಿಂದೆ ತಮ್ಮ ತರಗತಿಯಲ್ಲಿನ ಮಗುವೊಂದು ಯಶಸ್ವಿಯಾಗಲು ಸಹಾಯ ಮಾಡುವುದಕ್ಕಾಗಿ ಹೆಚ್ಚಿನ ಜವಾಬ್ದಾರಿಯನ್ನು ಹೊರಲು ಸಿದ್ಧರಿರುವ ಶಾಲಾ ಶಿಕ್ಷಕರಿದ್ದಾರೆ. ಅಗತ್ಯವಿರುವ ವಿಶೇಷ ಕ್ರಮಗಳ ಬಗ್ಗೆ ಅರಿವು ಹೊಂದಿರುವ ಶಿಕ್ಷಕರು, ತಮ್ಮ ಸಾಮಾನ್ಯ ಕೆಲಸಕ್ಕಿಂತ ಭಿನ್ನವಾಗಿದ್ದರೂ ವಿದ್ಯಾರ್ಥಿಗಳ ಪ್ರಯಾಣವನ್ನು ಬೆಂಬಲಿಸಿದರು. ಅಂತಹ ಪ್ರತಿಯೊಬ್ಬ ಶಿಕ್ಷಕರು ವಿಶೇಷಚೇತನ ಮಕ್ಕಳಿಗೆ ಸಾಮಾನ್ಯ ಶಾಲೆಗಳಲ್ಲಿ ಸಮೃದ್ಧ ಜೀವನವನ್ನು ನಡೆಸಲು ಮತ್ತು ಸಮಾಜದಲ್ಲಿ ಅವರಿಗೆ ಸೂಕ್ತವಾದ ಸ್ಥಾನವನ್ನು ಕಂಡುಕೊಳ್ಳಲು ಅವಕಾಶ ಒದಗಿಸುವಲ್ಲಿ ವೇಗವರ್ಧಕರಾಗಿ ಕಾರ್ಯ-ನಿರ್ವಹಿಸಿದ್ದಾರೆ.

* ಮಕ್ಕಳ ಗುರುತನ್ನು ರಕ್ಷಿಸಲು ಹೆಸರುಗಳನ್ನು ಬದಲಾಯಿಸಲಾಗಿದೆ.



ಪಲ್ಲವಿ ದತ್ತಾ ಇವರು ಒಬ್ಬ ನಿರ್ದಿಷ್ಟ ವಿಷಯಾಧಾರಿತ ಲೇಖಕರು, ಭೋಪಾಲ್‌ನಲ್ಲಿ ನೆಲೆಸಿದ್ದಾರೆ. ತರಬೇತಿ ಪಡೆದ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಇವರು ಪ್ರಸ್ತುತ ತಂತ್ರಜ್ಞಾನ ಮತ್ತು ಕಥೆ ಹೇಳುವ ವಿಭಾಗದಲ್ಲಿ ಬರೆಯುತ್ತಾರೆ. ಇವರು ಆರುಷಿಯಲ್ಲಿ ಸ್ವಯಂಸೇವಕರಾಗಿದ್ದಾರೆ ಮತ್ತು ಅಲ್ಲಿನ ಅದ್ಭುತ ಕಥೆಗಳಿಗೆ ಧ್ವನಿಯಾಗುವ ಆಶಯ ಹೊಂದಿದ್ದಾರೆ. ಅವರನ್ನು pallaveedutta@gmail.com ನಲ್ಲಿ ಸಂಪರ್ಕಿಸಬಹುದು.

ಅನುವಾದ: **ಶ್ರೀನಿಧಿ ಅಡಿಗ** | ಪರಿಶೀಲನೆ: **ನಾಗಮಣಿ ಎಸ್.ಎನ್.**

ಉದಾಹರಣೆಗೆ, ಒಂದು ಮಗುವು ಭಾಷೆ ಹಾಗೂ ಗಣಿತಕ್ಕೆ ಸಂಬಂಧಿಸಿ ಶ್ರೇಣಿಗೆ ತಕ್ಕ, ಸಾಮರ್ಥ್ಯಗಳನ್ನು ಹೊಂದಿದ್ದರೂ (Grade - appropriate competencies) ಅಭಿವ್ಯಕ್ತಿ ಸಾಮರ್ಥ್ಯಗಳ ಮೂಲಕ ಆ ಮಗುವಿನ ದುರ್ಬಲ ಸಮಾಜೋ - ಭಾವನಾತ್ಮಕ ಸ್ಥಿತಿಯು ಪ್ರತಿಫಲಿಸುತ್ತದೆ. ಇವುಗಳಲ್ಲಿ ತನ್ನನ್ನು ಮುಕ್ತವಾಗಿ ವ್ಯಕ್ತಪಡಿಸುವ ಸಾಮರ್ಥ್ಯದ ಕೊರತೆ, ಸ್ವಯಂ ಅರಿವಿನ ಕೊರತೆ, ಒಂದು ತಂಡವಾಗಿ ಕೆಲಸ ಮಾಡಬಲ್ಲ ಸಾಮರ್ಥ್ಯ, ಸಹವರ್ತಿಗಳ ಕಷ್ಟಗಳ ಬಗ್ಗೆ ಸೂಕ್ಷ್ಮ ಮನೋ-ಭಾವವನ್ನು ಹೊಂದಿರುವ ಮತ್ತು ಸುತ್ತಮುತ್ತಲಿನ ಜನರ ಇಷ್ಟಗಳು ಮತ್ತು ಇಷ್ಟವಿಲ್ಲದಿರುವ ಸಂಗತಿಗಳನ್ನು ಅರಿತು-ಕೊಂಡು ಒಬ್ಬರ ನಡವಳಿಕೆಯೊಂದಿಗೆ ಹೊಂದಿಕೊಳ್ಳುವುದು ಸಹ ಸೇರಿದೆ.